<u>ಸಿವಿಲ್?ನ್ಯಾಯಾಧೀಶರು ಮತ್ತು ಹೆಚ್ಚುವರಿ ಜೆ.ಎಂ.ಎಫ್.ಸಿ ನ್ಯಾಯಾಲಯ,
ತರೀಕೆರೆ</u>

**ಸಿ.ಸಿ.ಸಂಖ್ಯೆಃ 1224/2021**

<u>ಪಿರ್ಯಾದುದಾರರು</u>*B* ರಾಜ್ಯದ ಪರ ಅಜ್ಜಂಪುರ ಪೊಲೀಸರು

ವಿರುದ್ಧ

<u>ಆರೋಪಿ</u>

**1.** ಶ್ರೀ ಸಂತೋಷನಾಯ್ಕ,
ಬಿನ್ ಶ್ರೀ ಕೃಷ್ಣನಾಯ್ಕ,
ಸುಮಾರು 30 ವರ್ಷ,
ವಾಸಃ ಹೊಸಳ್ಳಿ ತಾಂಡ್ಯ,
ತರೀಕೆರೆ ತಾಲ್ಲೂಕು.

**2.** ಶ್ರೀ ನಂಜೇಗೌಡ,
ಬಿನ್ ಮಂಜುನಾಥ,
ಸುಮಾರು 27 ವರ್ಷ,
ಕಾಷಿಯರ್, ಬಾಲಾಜಿ ವೈನ್ಸ್ ತರೀಕೆರೆ,
ವಾಸಃ ಬರ್ಗೇನಹಳ್ಳಿ ಗ್ರಾಮ,
ಲಕ್ಕವಳ್ಳಿ ಹೋಬಳಿ,
ತರೀಕೆರೆ ತಾಲ್ಲೂಕ.

# <u>ದೋಷಾರೋಪಣೆ</u>

ಸಂತೋಷ ಕುಮಾರ್ ಪಿ. ಎಸ್., ಎಂ.ಕಾಂ., ಎಲ್?ಎಲ್?ಎಂ., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ತರೀಕೆರೆ ಆದ ನಾನು, ಈ ಮೂಲಕ ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ-

ದಿನಾಂಕ 18.07.2019 ರಂದು ಸಂಜೆ 7.50 ರ ಸಮಯದಲ್ಲಿ ಅಜ್ಜಂಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಹೊಸಳ್ಳಿ ತಾಂಡ್ಯದ ಹುಲಿಯಮ್ಮನ ಸರದ ಹಳ್ಳದ ದಡದ ಹತ್ತಿರ 1 ನೇ ಆರೋಪಿಯಾದ ನೀವು ಯಾವುದೇ ಪರವಾನಗಿ ಇಲ್ಲದೆ 2 ನೇ ಆರೋಪಿಯಾದ ನಿಮ್ಮಿಂದ ಅಕ್ರಮವಾಗಿ ಪಡೆದ 90 ಎಂ.ಎಲ್.ನ 48 ಕ್ಯಾಪ್ಟನ್ ಮಾರ್ಟಿನ್ ಸ್ಪೆಷಲ್ ವಿಸ್ಕಿ ಮದ್ಯವನ್ನು

ಮಾರಾಟಕ್ಕಾಗಿ ಕೆಎ.18.ಎಕ್ಸ್.7109 ರಲ್ಲಿ ಸಾಗಾಣಿಕೆ ಮಾಡುತ್ತಿದ್ದು, ಆದುದರಿಂದ 1 ಮತ್ತು 2 ನೇ ಆರೋಪಿತರಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ 32 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಅಪರಾಧ ಮಾಡುವ ಉದ್ದೇಶದಿಂದ ಅಕ್ರಮವಾಗಿ1 ನೇ ಆರೋಪಿಯಾದ ನೀವು, 2 ನೇ ಆರೋಪಿಯಾದ ನಿಮ್ಮಿಂದ ಪಡೆದ ಮದ್ಯವನ್ನು ಹೊಂದಿದ್ದು, ಸದರಿ ಹೊಂದುವಿಕೆ ಅಕ್ರಮ ಎಂದು ಗೊತ್ತಿದ್ದರೂ ಸಹ ತಮ್ಮ ಬಳಿ ಹೊಂದಿದ್ದು ಆದುದರಿಂದ 1 ಮತ್ತು 2 ನೇ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ 34 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕ:08.12.2022 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷ್ಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಸಹಿ/-
ಸಿವಿಲ್?ನ್ಯಾಯಾಧೀಶರು ಮತ್ತು ಹೆಚ್ಚುವರಿ
ಜೆಎಂಎಫ್‌ಸಿ, ತರೀಕರೆ.